ನಿಮ್ಮೊಡನೆ

# ರಕ್ತಹೀನತೆಯ ಸವಾಲು

ಅನೇಕ ಮಹಿಳೆಯರಿಗೆ ತಾವು ರಕ್ತಹೀನತೆಯಿಂದ ಬಳಲುತ್ತಿರುವ ಅಂಶವೇ ಗೊತ್ತಿರುವುದಿಲ್ಲ. ಯಾವುದೋ ಕಾಯಿಲೆಗೆ ರಕ್ತ ಪರೀಕ್ಷೆಗೆಂದು ಬಂದಾಗಷ್ಟೇ ಅದರ ಅರಿವಾಗುವ ಪ್ರಸಂಗಗಳು ಮಾಮೂಲು.

ಭಾರತೀಯ ಮಹಿಳೆಯರಲ್ಲಿ ಅರ್ಧದಷ್ಟು ಮಂದಿ ರಕ್ತಹೀನತೆ (ಅನೀಮಿಯ)ಯಿಂದ ಬಳಲುತ್ತಿದ್ದಾರೆ. ಯೋಜನಾ ಆಯೋಗದ ಘಟಕವಾಗಿರುವ ಸಂಶೋಧನಾ ಸಂಸ್ಥೆಯೊಂದು ಸಿದ್ಧಪಡಿಸಿರುವ ಭಾರತ ಮಾನವ ಅಭಿವೃದ್ಧಿ ವರದಿ (ಐಡಿಎಚ್‌ಆರ್)ಯಲ್ಲಿ ವ್ಯಕ್ತವಾಗಿರುವ ಅಂಶ ಇದು. ಭಾರತೀಯ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚಿದೆ ಎಂಬುದು ಮೊದಲಿಂದಲೂ ತಿಳಿದಿರುವ ಸಂಗತಿಯೇ. ಮಹಿಳೆಯರ ಈ ಆರೋಗ್ಯ ಸಮಸ್ಯೆಗೆ ಸಾಮಾಜಿಕ ಕಾರಣಗಳು ತಳುಕಿಹಾಕಿಕೊಂಡಿವೆ ಎಂಬುದನ್ನು ಅಲ್ಲಗಳೆಯುವ ಹಾಗಿಲ್ಲ. ಮಹಿಳೆಯರ ಸ್ಥಿತಿಗತಿ ಸುಧಾರಣೆಗಾಗಿ ಭಾರತದಲ್ಲಿ ಅಸಂಖ್ಯ ಮಹಿಳಾ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳೂ ಚಾಲ್ತಿಯಲ್ಲಿವೆ. ಮಹಿಳಾ ಆರೋಗ್ಯ, ಪೌಷ್ಟಿಕತೆ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯಗಳಲ್ಲಿ ಹಲವು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಲೂ ಇವೆ. ಹೀಗಿದ್ದೂ ಶೇಕಡಾ 55.3ರಷ್ಟು ಭಾರತೀಯ ಮಹಿಳೆಯರು ರಕ್ತಹೀನತೆಯಿಂದ ಬಳಲುವುದು ಮಾತ್ರ ತಪ್ಪಿಲ್ಲ ಎಂಬುದು ಆತಂಕ ತರುವ ಸಂಗತಿ.

1998–99ರಿಂದ 2005–06ರ ಅವಧಿಯಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವ ಮಹಿಳೆಯರ ಪ್ರಮಾಣ ಶೇ 3ರಷ್ಟು ಹೆಚ್ಚಾಗಿದೆ ಎಂಬುದನ್ನು ಈ ವರದಿ ಎತ್ತಿ ಹೇಳಿದೆ. ರಕ್ತಹೀನತೆಗೆ ಕಾರಣವಾಗುವಂತಹ ಕಬ್ಬಿಣಾಂಶದ ಕೊರತೆ ಅಲ್ಪ ಪ್ರಮಾಣದಿಂದ ತೀವ್ರ ಮಟ್ಟದವರೆಗೆ ಈ ಮಹಿಳೆಯರನ್ನು ಬಾಧಿಸುತ್ತಿದೆ. ಇನ್ನು  ಬಹುತೇಕ ಹದಿಹರೆಯದ ಹುಡುಗಿಯರಲ್ಲಂತೂ ಹೆಮೊಗ್ಲೊಬಿನ್ ಮಟ್ಟ ಆರೋಗ್ಯವಂತ ಮಹಿಳೆಯರಲ್ಲಿ ಇರಬೇಕಾದಂತಹ 12 ಗ್ರಾಂ/ಡೆಸಿಲೀಟರ್ ಪ್ರಮಾಣಕ್ಕಿಂತ ಕಡಿಮೆಯೇ ಇರುವುದು ಮಾಮೂಲಾಗಿದೆ. ಈ ರಕ್ತಹೀನತೆ ಕಾಡುವುದು ಬಡವರ್ಗದ ಮಹಿಳೆಯರನ್ನಷ್ಟೇ ಎಂದುಕೊಂಡರೆ ಅದು ತಪ್ಪು. ಶ್ರೀಮಂತ ಹಾಗೂ ಮಧ್ಯಮವರ್ಗದ ಮಹಿಳೆಯರನ್ನೂ ಈ ರಕ್ತಹೀನತೆಯ ಭೂತ ಬಿಟ್ಟಿಲ್ಲ. ಇದಕ್ಕೆ ಕಾರಣವಾದರೂ ಏನು?

ಹೆಣ್ಣುಮಕ್ಕಳನ್ನು ನಾವು ಸಾಂಸ್ಕೃತಿಕವಾಗಿ ನೋಡುವ ದೃಷ್ಟಿಕೋನ ಇನ್ನೂ ಬದಲಾಗದಿರುವುದು ಬಹು ಮುಖ್ಯ ಕಾರಣ ಎಂಬುದನ್ನು ಮತ್ತೆಮತ್ತೆ ಒತ್ತಿ ಹೇಳಲೇಬೇಕಿದೆ. ಹೆಣ್ಣೆಂಬ ತಾತ್ಸಾರ, ಗಂಡು –ಹೆಣ್ಣುಮಗು ಎಂದು ತಾರತಮ್ಯ ಮಾಡುವ ಧೋರಣೆಗಳಿಂದಾಗಿ ಹೆಣ್ಣುಮಕ್ಕಳಿಗೆ ಬಾಲ್ಯ ಕಾಲದಲ್ಲಿ ಸಿಗುವ ಪೋಷಣೆಯೇ ಕಡಿಮೆಯದಾಗಿರುತ್ತದೆ. ಭಾರತೀಯ ಆಹಾರ ಕ್ರಮದಲ್ಲಿ ಕಬ್ಬಿಣಾಂಶದ ಲಭ್ಯತೆಯ ಕೊರತೆ ಹಾಗೂ ನೀರು ಮತ್ತು ಆಹಾರ ಜನ್ಯ ಸೋಂಕುಗಳಿಂದಾಗಿ ಉಂಟಾಗುವ ತೀವ್ರ  ರಕ್ತದ ನಷ್ಟವೂ ರಕ್ತಹೀನತೆಗೆ ಕಾರಣವಾಗುತ್ತವೆ. ರಕ್ತಹೀನತೆ, ವ್ಯಕ್ತಿಗಳ ದೈಹಿಕ ಹಾಗೂ ಗ್ರಹಣ ಶಕ್ತಿಯ ಮೇಲೆ ತೀವ್ರತರ ಪರಿಣಾಮ ಬೀರುತ್ತದೆ. ಮತ್ತೂ ಗಂಭೀರವಾದದ್ದೆಂದರೆ ತಾಯಿ ಮತ್ತು ಭ್ರೂಣದ ಆರೋಗ್ಯದ ಮೇಲೆ ಇದು ಬೀರುವ ಪರಿಣಾಮ. ಗರ್ಭಿಣಿಯಾಗಿರುವ ಸಂದರ್ಭದಲ್ಲಿನ ರಕ್ತಹೀನತೆಯಿಂದ ಉಂಟಾಗುವ ದುಷ್ಪರಿಣಾಮಗಳು ಹಲವು ಪೀಳಿಗೆಗಳವರೆಗೂ ಪ್ರವಹಿಸುತ್ತವೆ.

ಅನೇಕ ಮಹಿಳೆಯರಿಗೆ ತಾವು ರಕ್ತಹೀನತೆಯಿಂದ ಬಳಲುತ್ತಿರುವ ಅಂಶವೇ ಗೊತ್ತಿರುವುದಿಲ್ಲ. ಯಾವುದೋ ಕಾಯಿಲೆಗೆ ರಕ್ತ ಪರೀಕ್ಷೆಗೆಂದು ಬಂದಾಗಷ್ಟೇ ಇದರ ಅರಿವಾಗುವ ಪ್ರಸಂಗಗಳು ಮಾಮೂಲು. ರಕ್ತಹೀನತೆ ಕುರಿತಂತೆ ಮಹಿಳೆಯರಲ್ಲಿ ಈ ಅರಿವಿನ ಕೊರತೆಯೂ ಸಮಸ್ಯೆಯ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದೇ ಹೇಳಬೇಕು. ಕೃಶಾಂಗಿಯರಾಗಿರಲು ತೂಕ ಇಳಿಸುವುದಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವ ಇಂದಿನ ಮಹಿಳೆಯರು ರಕ್ತಹೀನತೆಯಂತಹ ಗಂಭೀರ ಸಮಸ್ಯೆಯತ್ತ ಗಮನ ಹರಿಸಿದ್ದು ಕಡಿಮೆ.

ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚು ವ್ಯಾಪಕವಾಗಿದೆ. 1998–99 ಹಾಗೂ 2005–06ರ ನಡುವೆ, ಎಲ್ಲಾ ಧಾರ್ಮಿಕ ಸಮುದಾಯದ (ಸಿಖ್ ಹಾಗೂ ಜೈನ ಮಹಿಳೆಯರನ್ನು ಹೊರತು ಪಡಿಸಿ)ಮಹಿಳೆಯರಲ್ಲೂ ರಕ್ತ ಹೀನತೆಯ ಪ್ರಮಾಣ ಹೆಚ್ಚಾಗಿದೆ. ಅದರಲ್ಲೂ  ಮುಸ್ಲಿಂ ಮಹಿಳೆಯರಲ್ಲಂತೂ ಹೆಚ್ಚಳದ ಪ್ರಮಾಣ ಶೇಕಡಾ 6ರಷ್ಟಿದೆ. ಜೊತೆಗೆ ಪರಿಶಿಷ್ಟ ಜಾತಿ, ವರ್ಗದ ಮಹಿಳೆಯರಲ್ಲೂ ರಕ್ತಹೀನತೆಯ ಪ್ರಮಾಣ ತೀವ್ರತರವಾಗಿದೆ ಎಂದೂ ಈ ವರದಿ ಎಚ್ಚರಿಸಿದೆ.

‘ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್’ ಅಸ್ತಿತ್ವದಲ್ಲಿದ್ದರೂ ಆರೋಗ್ಯದ ಮೂಲ ಸೌಕರ್ಯಗಳು ಹಾಗೂ ಮಾನವ ಸಂಪನ್ಮೂಲದ ವಿಚಾರದಲ್ಲಿ ಭಾರತ ಇನ್ನೂ ಕೆಳಮಟ್ಟದಲ್ಲೇ ಇದೆ. ರಾಷ್ಟ್ರದ ಅರ್ಧದಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿರುವ ಸಂದರ್ಭದಲ್ಲಿ, ಆರ್ಥಿಕ ಬೆಳವಣಿಗೆಯ ಮಾತುಗಳು ಅಥವಾ ಆರೋಗ್ಯಪೂರ್ಣ ರಾಷ್ಟ್ರದ ನಿರ್ಮಾಣ ಎಂಬಂತಹ ಮಾತುಗಳಾಗಲಿ ಅರ್ಥ ಕಳೆದುಕೊಳ್ಳುತ್ತವೆ.

■ ಸಿ.ಜಿ.ಮಂಜುಳಾ

